ಹೆಚ್ಚುಮಾಡಬಹುದು. ಸೂಪರ್ ಡಿಲಕ್ಸ್ ಹಾಕಲು ಸಧ್ಯಕ್ಕೆ ಸಾಧ್ಯವಿಲ್ಲವೆಂದು ಹೇಳಿದ್ದೇನೆ. ಬಾಡಿ ಬಿಲ್ಡಿಂಗ್‌ಗೆ ಹೋಗಿರತಕ್ಕ ಬಸ್ಸುಗಳು ಬಂದನಂತರ ವ್ಯವಸ್ಥೆ ಮಾಡುತ್ತೇನೆ.

ಸ್ವಾತಂತ್ರ್ಯ ಯೋಧರಿಗೆ ಕೇಂದ್ರ ಸರ್ಕಾರದಿಂದ ಧನ ಸಹಾಯ.

297(1518) ಶ್ರಿ ಕೆ.ಹರ್ಷಕುಮಾರ್ ಗೌಡ (ಚಾಮರಾಜ): ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ :-

ಅ) ಕರ್ನಾಟಕ ರಾಜ್ಯದಲ್ಲಿ ಎಷ್ಟು ಜನ ಸ್ವಾತಂತ್ರ್ಯ ಯೋಧರಿಗೆ ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರವು ನೀಡುವ ಧನ ದೊರಕುತ್ತಿದೆ.

ಆ) ಪ್ರತಿಯೊಬ್ಬ ಸ್ವಾತಂತ್ರ್ಯ ಯೋಧರಿಗೆ ದೊರಕುವ ಸಹಾಯ ಧನವೆಷ್ಟು.

ಇ) ರಾಜ್ಯದಲ್ಲಿ ಈವರೆಗೆ ಯಾವುದೇ ಸಹಾಯವನ್ನು ಪಡೆಯದೆ ಧನ ಸಹಾಯಕ್ಕಾಗಿ ಅರ್ಜಿ ಸಲ್ಲಿಸಿದ್ದು ಕಾಯುತ್ತಿರುವ ಸ್ವಾತಂತ್ರ್ಯ ಯೋಧರೆಷ್ಟು.

ಈ)ಈ ಸ್ವಾತಂತ್ರ್ಯ ಯೋಧರುಗಳಿಗೆ ಉಚಿತ ಬಸ್‌ಪಾಸ್ ನೀಡುವ ಉದ್ದೇಶ ಸರ್ಕಾರಕ್ಕೆ ಇದೆಯೇ?

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯ ಮಂತ್ರಿಗಳು) :

ಅ) 1. ಕೇಂದ್ರ ಪಿಂಚಣಿ ಪಡೆಯುತ್ತಿರುವವರು 5734

2. ರಾಜ್ಯ ಗೌರವಧನ ಪಡೆಯುತ್ತಿರುವವರು 15569

3. ಕೇಂದ್ರ ಹಾಗೂ ರಾಜ್ಯ ಗೌರವಧನ ಪಡೆಯುತ್ತಿರುವವರು 5547

4. ಗೋವಾ ಸ್ವಾತಂತ್ರ್ಯ ಯೋಧರ ಪಿಂಚಣಿ ಪಡೆಯುತ್ತಿರುವವರು 2349

ಒಟ್ಟು : 27199

ಆ) 1. ಕೇಂದ್ರ ಪಿಂಚಣಿದಾರರಿಗೆ ಮಾಹೆಯಾನ ರೂ. 1000-00

2. ರಾಜ್ಯ ಪಿಂಚಣಿದಾರರಿಗೆ ಮಾಹೆಯಾನ ರೂ. 500-00

3. ಗೋವಾ ಸ್ವಾತಂತ್ರ್ಯ ಯೋಧರಿಗೆ ಮಾಹೆಯಾನ ರೂ. 400-00

ಇ) 4796

ಈ) ರಾಜ್ಯದಲ್ಲಿರುವ ಸ್ವಾತಂತ್ರ್ಯ ಯೋಧರು ವರ್ಷಕೊಂದಾವರ್ತಿ ಕೆ.ಎಸ್.ಆರ್.ಟಿ.ಸಿ. ಬಸ್‌ಗಳ ಮೂಲಕ ರಾಜ್ಯದ ಯಾವುದೇ ಎರಡು ಸ್ಥಳಗಳ ನಡುವೆ ಉಚಿತವಾಗಿ ಪ್ರಯಾಣ ಮಾಡಲು ಅವಕಾಶ ಕಲ್ಪಿಸಲಾಗಿದೆ. ಈ ಯೋಜನೆಯನ್ನು ಮಾರ್ಪಾಡು ಮಾಡುವ ಉದ್ದೇಶ ಸದ್ಯಕ್ಕೆ ಸರ್ಕಾರದ ಮುಂದೆ ಇಲ್ಲ.

ಶ್ರಿ ಕೆ.ಹರ್ಷಕುಮಾರ್‌ಗೌಡ :- ಮಾನ್ಯ ಅಧ್ಯಕ್ಷರೆ ಸ್ವಾಂತ್ರ್ಯ ಯೋಧರಿಗೆ ಮಾಸಾಶನ

ಕೊಡುವುದುರ ಬಗ್ಗೆ ಪ್ರಶ್ನೆಯನ್ನು ಕೇಳದ್ದೇನೆ. ಕರ್ನಾಟಕದಲ್ಲಿ ಇದುವರೆಗೆ 27 199 ಜನರಿಗೆ ಮಾಸಾಶನ ದೊರುಕುತ್ತಿದೆ. ಇದರಲ್ಲಿ ಕೇಂದ್ರದ್ದು, ರಾಜ್ಯದ್ದು ಮತ್ತು ಗೋವಾ ಸ್ವಾತಂತ್ರ್ಯ ಯೋಧರದ್ದು ಎಲ್ಲಾ ಸೇರಿದೆ. ಆದರೆ ಇದುವರೆಗೆ 4796 ಜನರಿಗೆ ಅರ್ಜಿ ಸಲ್ಲಿಸಿದ್ದರೂ ಸಹಿತ ಮಾಸಾಶನ ಮಂಜೂರು ಮಾಡಿರುವುದಿಲ್ಲ. ಸ್ವಾತಂತ್ರ್ಯ ಗಳಿಸಿ ಸುಮಾರು 45ವರ್ಷ ಕಳೆದರೂ ಸಹ ಈವರೆಗೆ ಮಾಸಾಶನ ಇವರಿಗೆ ದೊರತಿಲ್ಲ.ಇದರ ಜೊತೆಗೆ ಮಾಸಾಶನಕ್ಕೆ ಅರ್ಜಿ ಹಾಕಬೇಕೆಂದು ಹೇಳುವುದು ಕೂಡ ಈ ಸ್ವಾತಂತ್ರ್ಯ ಯೋಧರಿಗಿ ಮಾಡುವಂತಹ ಅಗೌರವ ಎಂದು ತಿಳಿದುಕೊಂಡಿದ್ದೇನೆ. ಇದಕ್ಕೆ ಅವರು ಅರ್ಜಿ ಹಾಕಬೇಕಾಗಿಲ್ಲ ಅವರನ್ನು ಗುರುತಿಸಿ ಗೌರವಿಸಿ ಅವರಿಗೆ ಮಾಸಾಶನ ಕೊಡುವುದು ಸರ್ಕಾರದ ಹಾಗು ಸಮಾಜದ ಕರ್ತವ್ಯ. ಆದುದರಿಂದ 4796 ಜನರು ಯಾರು ಅರ್ಜಿ ಹಾಕಿದ್ದಾರೆ ಅವರಿಗೆ ಮಾಸಾಶನ ಬೇಗ ಮಂಜುರು ಮಾಡಲು ಏನು ಕ್ರಮ ಕೈಗೊಳ್ಳುತ್ತೀರಿ.

ಶ್ರೀ ಎಂ. ವೀರಪ್ಪ ಮೊಯಿಲಿ :- ಮಾನ್ಯ ಅಧ್ಯಕ್ಷರೆ, 4796 ಅರ್ಜಿಗಳ ವಿಲೇವಾರಿ ಆಗದೇ ಇರುವುದಕ್ಕೆ ಮುಖ್ಯಕಾರಣ ಸ್ಥಾನಿಕ ಚೌಕಶಿ, ವರದಿ ಬರದೇ ಇರುವುದು ಒಂದು ಎರಡನೆಯದು ಅರ್ಜಿದಾರರುಗಳಿಂದ ಸಂಪೂರ್ಣ ದಾಖಲೆಗಳು ಬಾರದೇ ಇರುವುದು. ಮೂರನೆಯದಾಗಿ ಜೈಲು ಅಧಿಕಾರಿಗಳಿಂದ ವರದಿ ಬರದೇ ಇರುವುದು . ಈ ಮೂರು ಕಾರಣಗಳಿಂದ ವಿಲೇವಾರಿಯಗದೆ ಉಳಿದಿದೆ. ಈ ಬಗ್ಗೆ ನಾನು ಮುಖ್ಯಕಾರ್ಯದರ್ಶಿಯವರ ಜೊತೆಯಲ್ಲಿ ಮಾತಾಡಿ ಇದನ್ನು ಹೇಗೆ ಸರಳೀಕರಣಗೊಳಿಸಬಹುದು,ಸಡಿಲಿಸಬಹುದು ಎಂಬುದರ ಬಗ್ಗೆ ಪರಿಶೀಲಿಸುತ್ತೇನೆ . ಏಕೆಂದರೆ ಅನೇಕರು ವಯಸ್ಸಾದವರು ಇದ್ದಾರೆ ಅವರು ಕಛೇರಿಯಿಂದ ಕಛೇರಿಗೆ ಅಲೆಯುವಂತಹ ಪರಿಸ್ಥಿತಿಯಲ್ಲಿಲ್ಲ. ಆದ್ದರಿಂದ ನಮ್ಮ ಸ್ಥಳೀಯ ಅಧಿಕಾರಿಗಳನ್ನು ಅವರ ಹತ್ತಿರ ಕಳುಹಿಸಿ ಅವರ ಹತ್ತಿರ ಇರುವ ಮಾಹಿತಿಯನ್ನು ತರಿಸಿ ಆದಷ್ಟು ಜಾಗ್ರತೆ ಇದರ ಬಗ್ಗೆ ಕ್ರಮ ಕೈಗೊಳ್ಳುತ್ತೇನೆ.ಯಾರು ನಿಜವಾದ ಸ್ವಾತಂತ್ರ್ಯ ಹೋರಾಟಗಾರರಿದ್ದಾರೆ ಅವರುಗಳ ದಾಖಲೆಗಳನ್ನು ಪರಿಶೀಲನೆ ಮಾಡಿ ಒಂದು ಸಮಯ ನಿಗದಿಗೊಳಿಸಿ ಇಂತಿಷ್ಟು ತಿಂಗಳುಗಳೊಳಗೆ ಇದನ್ನು ವಿಲೇವಾರಿ ಮಾಡಬೇಕೆಂದು ನಾನು ಆದೇಶ ಕೊಡುತ್ತೇನೆ.

ಶ್ರೀ ಎಂ.ವಿ ವೆಂಕಟಪ್ಪ:- ಮಾನ್ಯ ಮುಖ್ಯಮಂತ್ರಿಗಳು ಹೋದ ತಿಂಗಳು ವಿಧುರಾಶ್ವತ್ಥದಲ್ಲಿ ಕೋಲಾರ ಜಿಲ್ಲೆಯ, ಸಮ್ಮೇಳನದಲ್ಲಿ ಭಾಗವಹಿಸಿದಾಗ ಹೇಳಿದ್ದರು.ಅವರಿಗೆ 500 ರೂಪಾಯಿ ಕೊಡುತ್ತಿದ್ದೇವೆ ಅದನ್ನು ಹೆಚ್ಚಿಸುತ್ತೇವೆ ಎಂದು ಆಶ್ವಾಸನೆಯನ್ನು ಕೊಟ್ಟಿದ್ದರು . ಇಂತಹ ಸ್ವಾತಂತ್ರ್ಯ ಯೋಧರ ಫಲದಿಂದ ನಾವೆಲ್ಲರೂ ಇವೊತ್ತು ಇರುವುದು. ಆಗ ಅವರು ಸ್ವಾತಂತ್ರ್ಯ ಹೋರಾಟ ಮಾಡದೆ ಇದ್ದಿದ್ದರೊ ನಾವು ಈಗ ಇಲ್ಲಿಗೆ ಬರಲು ಆಗುತ್ತಿರಲಿಲ್ಲ . ತಾವು ಅವರಿಗೆ ಕೊನೇ ಪಕ್ಷ 100-150 ರೂಪಾಯಿ ಹೆಚ್ಚು ಮಾಡುತ್ತೇವೆಂದು ಪ್ರಾಮಿಸ್ ಮಾಡಿದ್ದೀರಿ ಈ ಬಗ್ಗೆ ಕ್ರಮ ಕೈಗೊಳ್ಳುತ್ತೀರಾ? I myslef is a political prisoner.

ಶ್ರೀ ಎಂ. ವೀರಪ್ಪ ಮೊಯಿಲಿ :- ಮಾನ್ಯ ವೆಂಕಟಪ್ಪನವರು ಹೇಳಿದ್ದು ಸಾಧುವಾಗಿದೆ ನಾನು ವಿಧುರಾಶ್ವತ್ಥದಲ್ಲಿ ನಡೆದ ಸಮಾರಂಭಕ್ಕೆ ಹೋದಾಗ ಈ ಬಗ್ಗೆ ಪುನರ್‌ಪರಿಶೀಲನೆ ಮಾಡುತ್ತೇನೆ ಎಂದು ಹೇಳಿದ್ದೇನೆ . ಈ ವಿಚಾರ ನಾನು ಆಲೋಚನೆ ಮಾಡುತ್ತೇನೆ.

ರಾಜ್ಯದ ಆಡಳಿತದಲ್ಲಿ ಸಮಗ್ರವಾಗಿ ಕನ್ನಡವನ್ನು ಬಳಸುವುದು.

298 (142) ಶ್ರೀ ಬಿ.ಎಂ.ಇದಿನಬ್ಬ (ಉಳ್ಳಾಳ):-ಮಾನ್ಯ ಮುಖ್ಯಮಂತ್ರಿಗಳು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?